ತಂಪು ಆವರಿಸಿಕೊಳ್ಳಬೇಕಾಗಿದ್ದ ದಿನಗಳಲ್ಲಿ ಒಣಹವೆ ನಾಡನ್ನು ತುಂಬಿಕೊಂಡಿದೆ. ವಾತಾವರಣದ ಕುದಿಗಿಂತಲೂ ಮೈಮನಗಳಲ್ಲಿನ ಕುದಿ ಹೆಚ್ಚಾಗಿದೆ. 'ಇದೋ ಬಂದೆ' ಎಂದು ಬರಗಾಲ ಹೊಸ್ತಿಲಲ್ಲಿ ನಿಂತಿದೆ, ಹಲವು ಭಾಗಗಳಿಗೆ ಅಡಿಯಿಟ್ಟಿದೆ. ರೈತರ ಕೃಷಿ ಯೋಜನೆಗಳು ತಲೆಕೆಳಗಾಗಿವೆ. ಬೆಳೆಯಿಲ್ಲ ಎಂದಮೇಲೆ, ಕೃಷಿ ಕಾರ್ಮಿಕರಿಗೆ ಉದ್ಯೋಗನಷ್ಟ, ನಾಡಿನಲ್ಲಿ ಆಹಾರದ ಕೊರತೆ ಸಹಜ. ಜಲಾಶಯಗಳ ಬಂಡವಾಳ ಬಡವಾಗತೊಡಗಿ ಕುಡಿಯುವ ನೀರಿಗೂ ಕೊರೆಯಾಗುವ ಸಾಧ್ಯತೆ ದಟ್ಟವಾಗಿದೆ. ಈ ಮಳೆಗಾಲದ ಮುಂದಿನ ದಿನಗಳೂ ಆಶಾದಾಯಕವಾಗಿಲ್ಲ ಎಂದು ತಜ್ಞರು ಹೇಳುತ್ತಿದ್ದಾರೆ. ಮುಂದೇನು? ಮಳೆಯಿಲ್ಲದ ವರ್ಷಋತುವಿನಲ್ಲಿನ ಕನ್ನಡನಾಡಿನ ಚೆಲ್ಲಾಪಿಲ್ಲಿ ಬಿಂಬಗಳು ಇಲ್ಲಿವೆ. ಕರ್ನಾಟಕದ ನಾಳೆಗಳ ಬಗ್ಗೆ ಯೋಚಿಸಲು ಹಾಗೂ ಮುಂದಿರುವ ಸವಾಲುಗಳನ್ನು ಎದುರಿಸಲು ಅಗತ್ಯವಾದ ಸಿದ್ಧತೆ ನಡೆಸಲು ಈ ಒಡಕಲು ಬಿಂಬಗಳು ಒತ್ತಾಯಿಸುವಂತಿವೆ.

■ ಕೋಡಿಬೆಟ್ಟು ರಾಜಲಕ್ಷ್ಮಿ

ಫೋಟೋ: ಪ್ರಕಾಶ ಕಂದಕೂರ

